**ಓ.ಎಸ್. ನಂಃ 140/2023**

**ಪಿ.ಡಬ್ಲ್ಯೂಃ 1**

**ದಿನಾಂಕ 06.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ ಪಿ.ಡಿ ವಕೀಲರಿಂದಃ</u>**

8. ಸರ್ವೆ ನಂಬರ್ 23/10 ರ 18 ಗುಂಟೆ ಜಮೀನು ಪ್ರತಿವಾದಿಗೆ ಪಾಲು ವಿಭಜನೆಯ ಮುಖಾಂತರ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂಬರ್ 22/14 ರಲ್ಲಿ 7 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ನಮಗೆ ಮಾಹಿತಿ ಇಲ್ಲದ ಹಾಗೆ ಪ್ರತಿವಾದಿ ತಮ್ಮ ಹೆಸರಿಗೆ ಸದರಿ ಜಮೀನನ್ನು ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ಬೆನ್ನ ಹಿಂದೆ ಪ್ರತಿವಾದಿಯು ಮೇಲೆ ಹೇಳಿದ ಆಸ್ತಿಗಳ ಖಾತೆ ವರ್ಗಾವಣೆ ಮಾಡಿರುತ್ತಾರೆ ಎಂದು ಸದರಿ ವರ್ಗಾವಣೆ ಆದೇಶಗಳನ್ನು ನಾವು ಇಲ್ಲಿಯವರೆಗೂ ಪ್ರಶ್ನಿಸಿರುವುದಿಲ್ಲ ಆದರೆ ಇನ್ನೂ ಮುಂದೆ ಪ್ರಶ್ನಿಸುತ್ತೇವೆ ಎಂದು ನುಡಿದಿರುತ್ತಾರೆ.

9. ಸರ್ವೆ ನಂಬರ್ 23/10 ರ 18 ಗುಂಟೆ ಜಮೀನು ಮತ್ತು ಸರ್ವೆ ನಂಬರ್ 22/14 ರ 7 ಗುಂಟೆ ಜಮೀನನ್ನು ಹುಚ್ಚೇಗೌಡ ಮತ್ತು ಸಣ್ಣೇಗೌಡರಿಂದ 1983 ರಲ್ಲಿ ತಿಮ್ಮಮ್ಮ ಎನ್ನುವವರು ಖರೀದಿಸಿದ್ದರು ಎಂದರೆ ಸರಿಯಲ್ಲ. ನಂತರದಲ್ಲಿ ಸದರಿ ತಿಮ್ಮಮ್ಮರವರು ಸರ್ವೆ ನಂಬರ್ 23/10 ರ 18 ಗುಂಟೆ ಜಮೀನು ಮತ್ತು ಸರ್ವೆ ನಂಬರ್ 22/14 ರ 7 ಗುಂಟೆ ಜಮೀನನ್ನು ವಾದಿಯ ತಾಯಿಯಾದ ನಿಂಗಮ್ಮ ಕೋಂ ಜವರನಾಯಕರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

10. ಪ್ರತಿವಾದಿಯ ಸಹೋದರನಾದ ರಾಮನಾಯಕರವರು ನಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸರ್ವೆ ನಂಬರ್ 23/16 ರ 20 ಗುಂಟೆ ಜಮೀನಿನ ಸಂಬಂಧ ಅಸಲು ದಾವೆ ಸಂಖ್ಯೆ 108/2020 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಸಹೋದರ ನಮ್ಮ ವಿರುದ್ಧ ಅಸಲು ದಾವೆ ಸಂಖ್ಯೆ 108/2020 ಹೂಡಿದ ನಂತರದಲ್ಲಿ ನಾವು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ.

11. ಪ್ರತಿವಾದಿಯ ಸಹೋದರನಾದ ರಾಮನಾಯಕರವರ ಸರ್ವೆ ನಂಬರ್ 23/16 ರ 20 ಗುಂಟೆ ಜಮೀನು ತಂದ್ರೆಕೊಪ್ಪಲಿನ ಮುಖ್ಯ ರಸ್ತೆಯ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಹೋದರನಾದ ರಾಮನಾಯಕರವರ ಸದರಿ ಜಮೀನನ್ನು ದಾವಾ ಅನುಸೂಚಿಯಲ್ಲಿ ಸೇರಿಸಿ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಯಾವ ದಿಕ್ಕಿಗೂ ಸಹ ಪ್ರತಿವಾದಿಯ ಜಮೀನು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಜಮೀನು ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಇಲ್ಲದಿರುವುದರಿಂದ ಪ್ರತಿವಾದಿ ನನಗೆ ಕಿರುಕುಳ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ.

12. ದಿನಾಂಕ 27.06.2019 ರ ನೊಂದಾಯಿತ ವಿಭಾಗಪತ್ರದ ಪ್ರಕಾರ ತಮ್ಮ ಹಿಸ್ಸೆಗೆ ಬಂದ ಜಮೀನುಗಳ ಸ್ವಾಧೀನದಲ್ಲಿ ಪ್ರತಿವಾದಿ ಇದ್ದು, ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಪ್ರತಿವಾದಿಯ ಯಾವುದೇ ಜಮೀನು ಇಲ್ಲದಿದ್ದರೂ ಸಹ ಮತ್ತು ಪ್ರತಿವಾದಿ ದಾವಾ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡದಿದ್ದರೂ ಸಹ ಪ್ರತಿವಾದಿಯ ಸಹೋದರನಾದ ರಾಮನಾಯಕರವರು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 108/2020 ರ ದಾವೆಯನ್ನು ಹೂಡಿದ್ದಕ್ಕಾಗಿ ನಾನು ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಸರಿಯಾಗಿರುತ್ತದೆ ಎಂದು ತೋರಿಸಲು ಯಾವುದೇ ಪೂರಕವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಪ್ರತಿವಾದಿಯ ಸಹೋದರನಾದ ರಾಮನಾಯಕರವರ ಜಮೀನನ್ನು ದಾವಾ ಅನುಸೂಚಿಯಲ್ಲಿ ಸೇರಿಸಿ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**